## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | | 779(866) |
| ಸದಸ್ಯರ ಹೆಸರು | | ಶ್ರೀ ಮಧು ಜಿ. ಮಾದೇಗೌಡ<br>(ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 24.08.2026 |
| ಪ್ರಶ್ನೆ | | ಉತ್ತರ |
| (ಅ) | ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಸಾರ್ವಜನಿಕ ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು ಅವು ಯಾವುವು: | ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಸಾರ್ವಜನಿಕ ವಿಶ್ವವಿದ್ಯಾಲಯಗಳ ಒಟ್ಟು ಸಂಖ್ಯೆ:32. ವಿವರವನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |
| (ಆ) | ಪದವಿ ಮತ್ತು ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳ ಅಂಕಪಟ್ಟಿ ಪ್ರಮಾಣ ಪತ್ರಗಳನ್ನು ಯಾವ ಶೈಕ್ಷಣಿಕ ಸಾಲಿನಿಂದ National Academic Depository [NAD] & Digilockerನಲ್ಲಿ ಡಿಜಿಟಲ್ ರೂಪದಲ್ಲಿ ಈ ಮೇಲ್ಕಂಡ ವಿವಿಗಳಲ್ಲಿ ಸಂಗ್ರಹಿಸಲಾಗುತ್ತಿದೆ. (ಶೈಕ್ಷಣಿಕ ಸಾಲಿನ ವಿವರದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾದ National Academic Depository (NAD) ಯೋಜನೆಯನ್ನು ಎಲ್ಲಾ ವಿಶ್ವವಿದ್ಯಾಲಯಗಳು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕಾಗಿರುತ್ತದೆ.<br><br>ರಾಜ್ಯದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಡಿಯಲ್ಲಿನ ತಾಂತ್ರಿಕ ಕಾಲೇಜುಗಳು ಹಾಗೂ ಶಿಕ್ಷಣ ಇಲಾಖೆಯ ಅಡಿಯಲ್ಲಿರುವ ಪಾಲಿಟೆಕ್ನಿಕ್‌ಗಳು, ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಮತ್ತು ಉನ್ನತ ಶಿಕ್ಷಣ ಇಲಾಖೆಯ ಅಧೀನ ಇಲಾಖೆಗಳಲ್ಲಿ ಆಧಾರ್ ಸಂಖ್ಯೆ ಆಧಾರಿತ ಡಿಜಿಟಲ್ (e-sign)ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಆನ್‌ಲೈನ್ ಮೂಲಕ EDGS ತಂತ್ರಾಂಶವನ್ನು ಬಳಸಿಕೊಂಡು ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು online/digital format ನಲ್ಲಿ ತಯಾರಿಸಿ, ವಿತರಿಸಲು ಹಾಗೂ ಪ್ರತಿಗಳನ್ನು National Academic Depository (NAD)ಮಾದರಿಯಲ್ಲಿ,Karnataka State Data Center (KSDC)ಯಲ್ಲಿ ಶೇಖರಿಸಿ ಯೋಜನೆಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ದಿನಾಂಕ:31.05.2019ರಲ್ಲಿ ಆದೇಶಿಸಲಾಗಿದೆ.<br><br>ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಡಿಜಿಟಲ್ ಅಂಕಪಟ್ಟಿಗಳನ್ನು ಸಿದ್ಧಪಡಿಸಿ Karnataka State Data Centre (KSDC) ನಲ್ಲಿ ಶೇಖರಿಸಿ ಮತ್ತು ಪ್ರತಿಗಳನ್ನು NAD ಮತ್ತು Digilocker ನಲ್ಲಿ ಕಡ್ಡಾಯವಾಗಿ ಅಳವಡಿಸಿ ಅನುಷ್ಠಾನಗೊಳಿಸುವಂತೆ ಹಾಗೂ ಅಂಕಪಟ್ಟಿಗಳನ್ನು ಮತ್ತು ಪ್ರಮಾಣಪತ್ರಗಳನ್ನು ಮುದ್ರಿಸದಿರಲು ಕ್ರಮವಹಿಸುವಂತೆ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸರ್ಕಾರದ ಪತ್ರ ಸಂಖ್ಯೆ: ಇಡಿ 323 ಯುಎನ್‌ಇ 2020, ದಿನಾಂಕ: 28.02.2022ರ ಪತ್ರದನ್ವಯ ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ವಿಶ್ವವಿದ್ಯಾಲಯಗಳು ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು National Academic Depository (NAD) & DigiLocker ನಲ್ಲಿ ಶೈಕ್ಷಣಿಕವಾರು ಸಂಗ್ರಹಿಸುತ್ತಿರುವ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ. |

| | | |
|---|---|---|
| (ಇ) | ಕೆಲವು ವಿವಿಗಳು ಮುದ್ರಿತ ಅಥವಾ ಡಿಜಿಟಲ್ ರೂಪದಲ್ಲಿ ಅಂಕಪಟ್ಟಿ ಪ್ರಮಾಣಪತ್ರಗಳನ್ನು ನೀಡದಿರುವುದರಿಂದ ಪದವಿ ಮತ್ತು ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಭಾರತ ಸರ್ಕಾರದ ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಡಿಜಿಲಾಕರ್ ತಂತ್ರಾಂಶವು ಮೂಲ ವಿತರಕರಿಂದ ಡಿಜಿಲಾಕರ್ NAD ಪ್ಲಾಟ್ ಫಾರ್ಮ್ ಮೂಲಕ ಅಪ್ಲೋಡ್ ಮಾಡಿದ ನಂತರ ಎಲೆಕ್ಟ್ರಾನಿಕ್ ರೂಪದಲ್ಲಿ ನೀಡಲಾದ ವಿದ್ಯಾರ್ಥಿಯ ಶೈಕ್ಷಣಿಕ ದಾಖಲೆಗಳನ್ನು ಸೆಳೆಯುವ ಸೌಲಭ್ಯವನ್ನು ಹೊಂದಿದ್ದು, ಡಿಜಿಲಾಕರ್ ಪ್ಲಾಟ್ ಫಾರ್ಮನಲ್ಲಿ ಲಭ್ಯವಿರುವ ಮೂಲ ದಾಖಲೆಗಳು ಮಾಹಿತಿ ತಂತ್ರಜ್ಞಾನ ಕಾಯ್ದೆ-2020ರ ನಿಬಂಧನೆಯ ಪ್ರಕಾರ ಮಾನ್ಯವಾದ ದಾಖಲೆಗಳಾಗಿರುತ್ತವೆ ಹಾಗೂ ಡಿಜಿಲಾಕರ್ ಖಾತೆಗಳಲ್ಲಿ ನೀಡಲಾದ ದಾಖಲೆಗಳಲ್ಲಿ ಲಭ್ಯವಿರುವ ಪದವಿಗಳ ಅಂಕಪಟ್ಟಿಗಳು, ಪ್ರಮಾಣ ಪತ್ರಗಳು ಮತ್ತು ಇತರೆ ಶೈಕ್ಷಣಿಕ ದಾಖಲೆಗಳನ್ನು ದೃಢೀಕೃತ ದಾಖಲೆಗಳಾಗಿ ಸ್ವೀಕರಿಸಲು ವಿಶ್ವವಿದ್ಯಾಲಯ ಧನ ಆಯೋಗವು (UGC)ಉನ್ನತ ಶಿಕ್ಷಣ ಸಂಸ್ಥೆಗಳಿಗೆ ತಿಳಿಸಿರುತ್ತದೆ.<br><br>ರಾಜ್ಯದ ಉನ್ನತ ಶಿಕ್ಷಣ ವಲಯದ ಶೈಕ್ಷಣಿಕ ಮತ್ತು ಆಡಳಿತ ವಿಭಾಗಗಳಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಮಾಹಿತಿ ತಂತ್ರಜ್ಞಾನವನ್ನು ಉನ್ನತೀಕರಿಸಿ, ಪಾರದರ್ಶಕ ಆಡಳಿತ ಮತ್ತು ಗುಣಾತ್ಮಕ ಶೈಕ್ಷಣಿಕ ಗುಣಮಟ್ಟವನ್ನು ವೃದ್ಧಿಸಲು ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ತಂತ್ರಾಂಶ (Unified University & College Management System-UUCMS)ವನ್ನು ಇ -ಆಡಳಿತ ಇಲಾಖೆಯ ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್ (CSG) ರವರ ಸಹಯೋಗದೊಂದಿಗೆ ರಾಜ್ಯದಲ್ಲಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ತಂತ್ರಾಂಶ (Unified University & College Management System-UUCMS)ವನ್ನು 2020-21ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿದೆ.<br><br>ಸದರಿ ತಂತ್ರಾಂಶದಲ್ಲಿ 2021-22ನೇ ಸಾಲಿನ ನಂತರ ಫಲಿತಾಂಶ ಪ್ರಕಟಗೊಂಡಂತೆ ಸೆಮಿಸ್ಟರ್‌ವಾರು ಅಂಕಪಟ್ಟಿಗಳನ್ನು NAD ಗೆ ಅಪ್‌ಲೋಡ್ ಮಾಡುವುದರ ಜೊತೆಗೆ ಅಂಕಪಟ್ಟಿಯ ವಿನ್ಯಾಸವನ್ನು ಪೂರ್ಣಗೊಳಿಸಿ ಮುದ್ರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>NAD-Digilocker ಮೂಲಕ ಸೆಮಿಸ್ಟರ್ ಪ್ರಕಾರದ ಅಂಕಪಟ್ಟಿಗಳನ್ನು ಅಪ್‌ಲೋಡ್ ಮಾಡಲು UUCMS ನಲ್ಲಿ ಇಂಟರ್ ಫೇಸ್ ರಚಿಸಲಾಗಿದ್ದು, ಫಲಿತಾಂಶ ಮತ್ತು ಪ್ರಮಾಣ ಪತ್ರಗಳನ್ನು 24 ಘಂಟೆಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳದೇ ಅಪ್‌ಲೋಡ್ ಮಾಡಲಾಗುತ್ತಿದೆ. UUCMS ನಲ್ಲಿ ಅಂಕಪಟ್ಟಿಗಳನ್ನು Normal sheet ಅಥವಾ Preprinted Paperನಲ್ಲಿ ಮುದ್ರಿಸುವ ಅವಕಾಶವನ್ನು ಸಹ |

| | | |
|---|---|---|
| | | ಕಲ್ಪಿಸಲಾಗಿದೆ. ವಿಶ್ವವಿದ್ಯಾಲಯಗಳ ಅಂಕಪಟ್ಟಿಗಳು ಆಯಾ ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿರುತ್ತವೆ.<br><br>UUCMS ಎಲ್ಲಾ ಸೇವೆಗಳಿಗೆ ಯಾವುದೇ ಪಾಲುದಾರರಿಂದ ಯಾವುದೇ ಶುಲ್ಕವನ್ನು ಪಡೆಯದೇ ಸರ್ಕಾರವು ಉಚಿತವಾಗಿ ಸೇವೆಯನ್ನು ನೀಡುತ್ತಿದೆ.<br><br>ವಿಶ್ವವಿದ್ಯಾಲಯಗಳು ಕೋಟ್ಯಂತರ ರೂಪಾಯಿಗಳ ವೆಚ್ಚದಲ್ಲಿ ವಾಟರ್‌ಮಾರ್ಕ್ ಹರಿಯಲಾಗದ ಕಾಗದ(Watermarked, imperishable Paper) ಮೂಲಕ ಅಂಕಪಟ್ಟಿಗಳನ್ನು ತಯಾರಿಸಲು ಹೆಚ್ಚಿನ ವೆಚ್ಚವನ್ನು ಮಾಡಲಾಗುತ್ತಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ಯಾವುದೇ ಮೌಲ್ಯವರ್ಧಿತ ಪ್ರಯೋಜನ ಇಲ್ಲದಿರುವುದನ್ನು ಪರಿಗಣಿಸಿ, 2023-24ನೇ ಶೈಕ್ಷಣಿಕ ಸಾಲಿನಿಂದ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿನ ಅಧೀನ ಇಲಾಖೆಗಳು, ಸಾರ್ವಜನಿಕ ವಿಶ್ವವಿದ್ಯಾಲಯಗಳು ಹಾಗೂ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ರೂಪದಲ್ಲಿ ಕಡ್ಡಾಯವಾಗಿ ಸಂಗ್ರಹಿಸಿಡಲು ಉನ್ನತ ಶಿಕ್ಷಣ ವಿದ್ಯಾರ್ಥಿಗಳು ಸದರಿ ಅಂಕಪಟ್ಟಿಗಳ Credits ಗಳನ್ನು Academic Bank if Credit (ABC) ನಲ್ಲಿ ಕಡ್ಡಾಯವಾಗಿ ನೊಂದಾಯಿಸಿಕೊಳ್ಳಲು ಆದೇಶಿಸಿ, ವಿವಿಧ ನೇಮಕಾತಿ ಪ್ರಾಧಿಕಾರಗಳು/ಸಂಸ್ಥೆಗಳು ನೇಮಕಾತಿ ಸಮಯದಲ್ಲಿ NAD-DigiLoker ನಲ್ಲಿನ ಅಂಕಪಟ್ಟಿ ಹಾಗು ಪ್ರಮಾಣ ಪತ್ರಗಳನ್ನು ದೃಢೀಕೃತವೆಂದು ಪರಿಗಣಿಸುವಂತೆ ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಇಜಿಒವಿ 2023, ದಿನಾಂಕ:16.10.2023ರಲ್ಲಿ ಆದೇಶಿಸಿದೆ.<br><br>ಸದರಿ ಅಂಕಪಟ್ಟಿಗಳ Creditsಗಳನ್ನು ಪ್ರವೇಶಾತಿ, ವಿವಿದ ನೇಮಕಾತಿ ಪ್ರಾಧಿಕಾರಗಳು/ಸಂಸ್ಥೆಗಳು ನೇಮಕಾತಿ ಸಮಯದಲ್ಲಿ NAD-DigiLocker ನಲ್ಲಿನ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳನ್ನು ದೃಢೀಕೃತವೆಂದು ಪರಿಗಣಿಸುವಂತೆ ವಿಶ್ವವಿದ್ಯಾಲಯ ಧನ ಆಯೋಗವು(UGC) ಸಹ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ನಿರ್ದೇಶನ ನೀಡಿರುತ್ತದೆ. |
| (ಈ) | ಬಂದಿದ್ದಲ್ಲಿ, ಇದುವರೆವಿಗೂ ವಿದ್ಯಾರ್ಥಿಗಳಿಗೆ ಪದವಿ ಮತ್ತು ಸ್ನಾತಕೋತ್ತರ ಪದವಿಯ ಅಂಕಪಟ್ಟಿಗಳನ್ನು ವಿತರಿಸದಿರುವ ವಿವಿಗಳು ಯಾವುವು. ಯಾವ ಶೈಕ್ಷಣಿಕ ಸಾಲಿನಿಂದ ವಿತರಿಸಲು ಬಾಕಿ ಉಳಿಸಿಕೊಂಡಿದೆ: (ವಿವಿವಾರು ಶೈಕ್ಷಣಿಕ ಸಾಲು, ಪದವಿ-ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು) | ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿ ಬರುವ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಅಂಕಪಟ್ಟಿಗಳನ್ನು ವಿತರಿಸಲು ಬಾಕಿ ಉಳಿಸಿಕೊಂಡಿರುವ ವಿಶ್ವವಿದ್ಯಾಲಯವಾರು ಶೈಕ್ಷಣಿಕವಾರು ಪದವಿ, ಸ್ನಾತಕೋತ್ತರ ಪದವಿ ಮತ್ತು ವಿದ್ಯಾರ್ಥಿಗಳ ಸಂಖ್ಯೆಯ ಸಂಪೂರ್ಣ ವಿವರವನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಉ) | ಡಿಜಿಟಲ್ ಫ್ಲಾಟ್ ಪಾರ್ಮ್‌ನ ಅಂಕಪಟ್ಟಿಗೂ ವಿದ್ಯಾರ್ಥಿಗಳಿಂದ ಅಂಕಪಟ್ಟಿ ಶುಲ್ಕ ವಸೂಲಿ ಮಾಡಲು ಅವಕಾಶವಿದೆಯೇ: | ಡಿಜಿಟಲ್ ಫ್ಲಾಟ್ ಪಾರ್ಮ್‌ನ ಅಂಕಪಟ್ಟಿಗೆ ವಿದ್ಯಾರ್ಥಿಗಳಿಂದ ಅಂಕಪಟ್ಟಿ ಶುಲ್ಕ ವಸೂಲಿ ಮಾಡಲು ಅವಕಾಶವಿರುವುದಿಲ್ಲ. |
| ಊ) | ಕೆಲವು ವಿವಿಗಳು ಅಂಕಪಟ್ಟಿ ವಿತರಿಸಿಲ್ಲ ಇನ್ನೊಂದೆಡೆ ವಿದಾರ್ಥಿಗಳಿಂದ ಅಂಕಪಟ್ಟಿ ಶುಲ್ಕವನ್ನು ನಿಯಮಬಾಹಿರವಾಗಿ ವಸೂಲಾತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಇದರ ನಿಯಂತ್ರಣಕ್ಕೆ ಸರ್ಕಾರದ ಕ್ರಮವೇನು; ವಿದಾರ್ಥಿಗಳಿಂದ ಸಂಗ್ರಹಿಸಲಾಗಿರುವ ಅಂಕಪಟ್ಟಿ ಶುಲ್ಕ ಮೊತ್ತ ಎಷ್ಟು? (ವಿವಿವಾರು ಶೈಕ್ಷಣಿಕ ಸಾಲುವಾರು ಸಂಗ್ರಹಿಸಿದ ಮೊತ್ತದ ಮಾಹಿತಿ ನೀಡುವುದು) | ವಿಶ್ವವಿದ್ಯಾಲಯಗಳಲ್ಲಿ ಅಂಕಪಟ್ಟಿ ವಿತರಿಸಲು ನಿಯಮಬಾಹಿರವಾಗಿ ಶುಲ್ಕ ವಸೂಲಾತಿ ಮಾಡಿರುವ ಯಾವುದೇ ಪ್ರಕರಣಗಳು ಸರ್ಕಾರದ ಮುಂದಿರುವುದಿಲ್ಲ.<br><br>UUCMSನ ಎಲ್ಲಾ ಸೇವೆಗಳಿಗೆ ಯಾವುದೇ ಪಾಲುದಾರರಿಂದ ಶುಲ್ಕವನ್ನು ಪಡೆಯದೇ ಸರ್ಕಾರವು ಉಚಿತವಾಗಿ ಸೇವೆಯನ್ನು ನೀಡುತ್ತಿದೆ. ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಶುಲ್ಕದ ಮೊತ್ತ ಶೈಕ್ಷಣಿಕ ಸಾಲುವಾರು ಸಂಗ್ರಹಿಸಿದ ವಿವರವನ್ನು ಅನುಬಂಧ-4ರಲ್ಲಿ ಒದಗಿಸಲಾಗಿದೆ. |

**ಸಂಖ್ಯೆ**: ಇಡಿ 183 ಯುಎನ್ಇ 2026

(ಬಸವರಾಜ ರಾಯರಡ್ಡಿ)
ಉನ್ನತ ಶಿಕ್ಷಣ ಸಚಿವರು

## ಅನುಬಂಧ-1

**ಉನ್ನತ ಶಿಕ್ಷಣ ಇಲಾಖೆಯಡಿ ಒಟ್ಟು 32 ಸಾರ್ವಜನಿಕ ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ಕೆಳಗಿನಂತಿವೆ.**

| ಕ್ರ. ಸಂ | ಸಾರ್ವಜನಿಕ ವಿಶ್ವವಿದ್ಯಾಲಯಗಳ ಹೆಸರು |
|---|---|
| 1. | ಮೈಸೂರು ವಿಶ್ವವಿದ್ಯಾಲಯ |
| 2. | ಮಂಡ್ಯ ವಿಶ್ವವಿದ್ಯಾಲಯ |
| 3. | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ |
| 4. | ಗುಲ್ಬರ್ಗಾ ವಿಶ್ವವಿದ್ಯಾಲಯ |
| 5. | ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ |
| 6. | ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ |
| 7. | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ |
| 8. | ಕರ್ನಾಟಕ ಜಾನಪದ ವಿಶ್ವವಿದ್ಯಾಲಯ |
| 9. | ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ |
| 10. | ಕುವೆಂಪು ವಿಶ್ವವಿದ್ಯಾಲಯ |
| 11. | ದಾವಣಗೆರೆ ವಿಶ್ವವಿದ್ಯಾಲಯ |
| 12. | ಮಂಗಳೂರು ವಿಶ್ವವಿದ್ಯಾಲಯ |
| 13. | ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ |
| 14. | ಕನ್ನಡ ವಿಶ್ವವಿದ್ಯಾಲಯ, ಹಂಪಿ |
| 15. | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ. |
| 16. | ಕರ್ನಾಟಕ ರಾಜ್ಯ ಅಕ್ಕಮಹಾ ದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ |
| 17. | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| 18. | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| 19. | ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು |
| 20. | ತುಮಕೂರು ವಿಶ್ವವಿದ್ಯಾಲಯ, ತುಮಕೂರು |
| 21. | ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ. |
| 22. | ಡಾ. ಬಿ.ಆರ್. ಅಂಬೇಡ್ಕರ್ ವಿಶ್ವವಿದ್ಯಾಲಯ, ಬೆಂಗಳೂರು. |
| 23. | ನೃಪತುಂಗ ವಿಶ್ವವಿದ್ಯಾಲಯ |
| 24. | ಹಾಸನ ವಿಶ್ವವಿದ್ಯಾಲಯ |
| 25. | ಚಾಮರಾಜನಗರ ವಿಶ್ವವಿದ್ಯಾಲಯ |
| 26. | ಬೀದರ್ ವಿಶ್ವವಿದ್ಯಾಲಯ |
| 27. | ಕೊಪ್ಪಳ ವಿಶ್ವವಿದ್ಯಾಲಯ |
| 28. | ಕೊಡಗು ವಿಶ್ವವಿದ್ಯಾಲಯ |
| 29. | ಬಾಗಲಕೋಟ ವಿಶ್ವವಿದ್ಯಾಲಯ ಜಮಖಂಡಿ |
| 30. | ಹಾವೇರಿ ವಿಶ್ವವಿದ್ಯಾಲಯ, ಹಾವೇರಿ |
| 31. | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ |
| 32. | ಯುವಿಸಿಇ ವಿಶ್ವವಿದ್ಯಾಲಯ |

**ಅನುಬಂಧ-2**

| ಕ್ರ. ಸಂ | ಸಾರ್ವಜನಿಕ ವಿಶ್ವವಿದ್ಯಾಲಯಗಳ ಹೆಸರು | ವಿಶ್ವವಿದ್ಯಾಲಯಗಳು ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು National Academic Depository (NAD) & DigiLocker ನಲ್ಲಿ ಶೈಕ್ಷಣಿಕವಾರು ಸಂಗ್ರಹಿಸುತ್ತಿರುವ ವಿವರ |
|---|---|---|
| 01 | ಮೈಸೂರು ವಿಶ್ವವಿದ್ಯಾಲಯ | 2021-22ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 02 | ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ | 2021-22ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 03 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ | 2019-20ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 04 | ಕರ್ನಾಟಕ ಜಾನಪದ ವಿಶ್ವವಿದ್ಯಾಲಯ | 2024-25ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 05 | ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ | 2021-22ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 06 | ಕುವೆಂಪು ವಿಶ್ವವಿದ್ಯಾಲಯ | 2022-23ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 07 | ದಾವಣಗೆರೆ ವಿಶ್ವವಿದ್ಯಾಲಯ | 2019-20ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 08 | ಮಂಗಳೂರು ವಿಶ್ವವಿದ್ಯಾಲಯ | 2021-22ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 09 | ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ | 2019-20ನೇ ಸಾಲಿನಿಂದ |
| 10 | ಕನ್ನಡ ವಿಶ್ವವಿದ್ಯಾಲಯ, ಹಂಪಿ | 2021-22ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 11 | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ. | 2020-21ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 12 | ಕರ್ನಾಟಕ ರಾಜ್ಯ ಅಕ್ಕಮಹಾ ದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ | 2022-23ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 13 | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | 2023-24ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 14 | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು | 2021-22ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 15 | ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು | 2021-22ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 16 | ತುಮಕೂರು ವಿಶ್ವವಿದ್ಯಾಲಯ, ತುಮಕೂರು | 2021-22ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 17 | ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ. | 2021-22ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ |
| 18 | ಡಾ. ಬಿ.ಆರ್. ಅಂಬೇಡ್ಕರ್ ವಿಶ್ವವಿದ್ಯಾಲಯ, ಬೆಂಗಳೂರು. | -- |
| 19 | ನೃಪತುಂಗ ವಿಶ್ವವಿದ್ಯಾಲಯ | -- |
| 20 | ಹಾಸನ ವಿಶ್ವವಿದ್ಯಾಲಯ | 2024-25ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 21 | ಚಾಮರಾಜನಗರ ವಿಶ್ವವಿದ್ಯಾಲಯ | 2024-25ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |

| | | |
|---|---|---|
| 22 | ಬೀದರ್ ವಿಶ್ವವಿದ್ಯಾಲಯ | 2023-24ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 23 | ಕೊಪ್ಪಳ ವಿಶ್ವವಿದ್ಯಾಲಯ | 2023-24ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 24 | ಕೊಡಗು ವಿಶ್ವವಿದ್ಯಾಲಯ | 2023-24ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 25 | ಬಾಗಲಕೋಟ ವಿಶ್ವವಿದ್ಯಾಲಯ ಜಮಖಂಡಿ | 2023-24ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 26 | ಹಾವೇರಿ ವಿಶ್ವವಿದ್ಯಾಲಯ, ಹಾವೇರಿ | 2023-24ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. |
| 27 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ | -- |
| 28 | ಯುವಿಸಿಇ ವಿಶ್ವವಿದ್ಯಾಲಯ | -- |
| 29 | ಮಂಡ್ಯ ವಿಶ್ವವಿದ್ಯಾಲಯ | -- |
| 30 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ | -- |
| 31 | ಗುಲ್ಬರ್ಗಾ ವಿಶ್ವವಿದ್ಯಾಲಯ | -- |
| 32 | ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ | -- |

## ಅನುಬಂಧ-3

<table>
<tr><th>ಕ್ರ. ಸಂ</th><th>ಸಾರ್ವಜನಿಕ ವಿಶ್ವವಿದ್ಯಾಲಯಗಳ ಹೆಸರು</th><th>ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಅಂಕಪಟ್ಟಿಗಳನ್ನು ವಿತರಿಸಲು ಬಾಕಿ ಉಳಿಸಿಕೊಂಡಿರುವ ವಿಶ್ವವಿದ್ಯಾಲಯವಾರು ಶೈಕ್ಷಣಿಕವಾರು ಪದವಿ, ಸ್ನಾತಕೋತ್ತರ ಪದವಿ ಮತ್ತು ವಿದ್ಯಾರ್ಥಿಗಳ ಸಂಖ್ಯೆಯ ಸಂಪೂರ್ಣ ವಿವರ</th></tr>
<tr><td></td><td>ಮೈಸೂರು ವಿಶ್ವವಿದ್ಯಾಲಯ</td><td><table><tr><th>ಶೈಕ್ಷಣಿಕ ಸಾಲು</th><th>ಪದವಿ ವಿದ್ಯಾರ್ಥಿಗಳ ಸಂಖ್ಯೆ</th><th>ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>2021-22ನೇ</td><td>5677</td><td>22747</td></tr>
<tr><td>2022-23ನೇ</td><td>26074</td><td>5627</td></tr>
<tr><td>2023-24ನೇ</td><td>26009</td><td>6144</td></tr>
<tr><td>2024-25ನೇ</td><td>6300</td><td>25085</td></tr>
<tr><td>2025-26ನೇ</td><td>5796</td><td>24721</td></tr></table></td></tr>
<tr><td></td><td>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ</td><td><table><tr><th>ಶೈಕ್ಷಣಿಕ ಸಾಲು</th><th>ಪದವಿ ವಿದ್ಯಾರ್ಥಿಗಳ ಸಂಖ್ಯೆ</th><th>ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>2021-22ನೇ</td><td>0</td><td>0</td></tr>
<tr><td>2022-23ನೇ</td><td>0</td><td>0</td></tr>
<tr><td>2023-24ನೇ</td><td>20696</td><td>2419</td></tr>
<tr><td>2024-25ನೇ</td><td>18399</td><td>2562</td></tr>
<tr><td>2025-26ನೇ</td><td>15342</td><td>2440</td></tr></table></td></tr>
<tr><td></td><td>ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ</td><td><table><tr><th>ಶೈಕ್ಷಣಿಕ ಸಾಲು</th><th>ಪದವಿ ವಿದ್ಯಾರ್ಥಿಗಳ ಸಂಖ್ಯೆ</th><th>ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>2022-23ನೇ</td><td>ಬಾಕಿ ಉಳಿಸಿಕೊಂಡಿರುವುದಿಲ್ಲ.</td><td>32</td></tr>
<tr><td>2023-24ನೇ</td><td>18</td><td>15</td></tr>
<tr><td>2024-25ನೇ</td><td>10</td><td>18</td></tr></table></td></tr>
<tr><td></td><td>ಕುವೆಂಪು ವಿಶ್ವವಿದ್ಯಾಲಯ</td><td><table><tr><th>ಶೈಕ್ಷಣಿಕ ಸಾಲು</th><th>ಪದವಿ ವಿದ್ಯಾರ್ಥಿಗಳ ಸಂಖ್ಯೆ</th><th>ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>2021-22ನೇ</td><td>11842</td><td>2343</td></tr>
<tr><td>2022-23ನೇ</td><td>12225</td><td>2321</td></tr>
<tr><td>2023-24ನೇ</td><td>10240</td><td>2356</td></tr>
<tr><td>2024-25ನೇ</td><td>10510</td><td>2248</td></tr>
<tr><td>2025-26ನೇ</td><td>11333</td><td>1672</td></tr></table></td></tr>
<tr><td></td><td>ದಾವಣಗೆರೆ ವಿಶ್ವವಿದ್ಯಾಲಯ</td><td><table><tr><th>ಶೈಕ್ಷಣಿಕ ಸಾಲು</th><th>ಪದವಿ ವಿದ್ಯಾರ್ಥಿಗಳ ಸಂಖ್ಯೆ</th><th>ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>2024-25ನೇ</td><td>13647</td><td>1889</td></tr>
<tr><td>2025-26ನೇ</td><td>39169</td><td>3577</td></tr></table></td></tr>
</table>

ಮಂಗಳೂರು ವಿಶ್ವವಿದ್ಯಾಲಯ

| ಶೈಕ್ಷಣಿಕ ಸಾಲು | ಪದವಿ ವಿದ್ಯಾರ್ಥಿಗಳ ಸಂಖ್ಯೆ | ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 2024-25ನೇ | Nill | 3187 |
| 2025-26ನೇ | 21685 | 3939 |

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ

| ಶೈಕ್ಷಣಿಕ ಸಾಲು | ಪದವಿ ವಿದ್ಯಾರ್ಥಿಗಳ ಸಂಖ್ಯೆ | ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 2025-26ನೇ | 850 | 280 |

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

| ಶೈಕ್ಷಣಿಕ ಸಾಲು | ಪದವಿ ವಿದ್ಯಾರ್ಥಿಗಳ ಸಂಖ್ಯೆ | ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 2024-25ನೇ | 135311 | - |
| 2025-26ನೇ | 306973 | 3959 |

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

| ಶೈಕ್ಷಣಿಕ ಸಾಲು | ಪದವಿ ವಿದ್ಯಾರ್ಥಿಗಳ ಸಂಖ್ಯೆ | ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 2025-26ನೇ | 23531 | 4505 |

ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು

| ಶೈಕ್ಷಣಿಕ ಸಾಲು | ಪದವಿ ವಿದ್ಯಾರ್ಥಿಗಳ ಸಂಖ್ಯೆ | ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 2023-24ನೇ | 105759 | 16825 |
| 2024-25ನೇ | 266584 | 30099 |
| 2025-26ನೇ | 184189 | 10170 |

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ.

| ಶೈಕ್ಷಣಿಕ ಸಾಲು | ಪದವಿ ವಿದ್ಯಾರ್ಥಿಗಳ ಸಂಖ್ಯೆ | ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 2022-23ನೇ | 16574 | 3600 |
| 2023-24ನೇ | 42345 | 8325 |
| 2024-25ನೇ | 53480 | 9180 |

ಹಾಸನ ವಿಶ್ವವಿದ್ಯಾಲಯ

| ಶೈಕ್ಷಣಿಕ ಸಾಲು | ಪದವಿ ವಿದ್ಯಾರ್ಥಿಗಳ ಸಂಖ್ಯೆ | ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 2023-24ನೇ | 12823 | 1658 |
| 2024-25ನೇ | 11898 | 1422 |

ಬೀದರ್ ವಿಶ್ವವಿದ್ಯಾಲಯ

| ಶೈಕ್ಷಣಿಕ ಸಾಲು | ಪದವಿ ವಿದ್ಯಾರ್ಥಿಗಳ ಸಂಖ್ಯೆ | ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 2024-25ನೇ | 43153 | 4823 |
| 2025-26ನೇ | 27078 | - |

<table>
<tr>
<td></td>
<td>ಕೊಪ್ಪಳ ವಿಶ್ವವಿದ್ಯಾಲಯ</td>
<td>
<table>
<tr><th>ಶೈಕ್ಷಣಿಕ ಸಾಲು</th><th>ಪದವಿ ವಿದ್ಯಾರ್ಥಿಗಳ ಸಂಖ್ಯೆ</th><th>ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>2023-24ನೇ</td><td>2672</td><td>823</td></tr>
</table>
</td>
</tr>
<tr>
<td></td>
<td>ಬಾಗಲಕೋಟ ವಿಶ್ವವಿದ್ಯಾಲಯ ಜಮಖಂಡಿ</td>
<td>
<table>
<tr><th>ಶೈಕ್ಷಣಿಕ ಸಾಲು</th><th>ಪದವಿ ವಿದ್ಯಾರ್ಥಿಗಳ ಸಂಖ್ಯೆ</th><th>ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>2023-24ನೇ</td><td>4240</td><td>310</td></tr>
<tr><td>2024-25ನೇ</td><td>8913</td><td>1230</td></tr>
<tr><td>2025-26ನೇ</td><td>37520</td><td>494</td></tr>
</table>
</td>
</tr>
</table>

<u>**ಅನುಬಂಧ-4**</u>

<table>
<tr><th>ಕ್ರ. ಸಂ</th><th>ಸಾರ್ವಜನಿಕ ವಿಶ್ವವಿದ್ಯಾಲಯಗಳ ಹೆಸರು</th><th>ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗಿರುವ ಅಂಕಪಟ್ಟಿ ಶುಲ್ಕದ ಮೊತ್ತ ಶೈಕ್ಷಣಿಕ ಸಾಲುವಾರು ವಿಶ್ವವಿದ್ಯಾಲಯವಾರು</th></tr>
<tr><td></td><td>ಮೈಸೂರು ವಿಶ್ವವಿದ್ಯಾಲಯ</td><td>
<table>
<tr><th>ಶೈಕ್ಷಣಿಕ ಸಾಲು</th><th>ಶುಲ್ಕದ ಮೊತ್ತ</th></tr>
<tr><td>2022-23ನೇ</td><td>17,02,800</td></tr>
<tr><td>2023-24ನೇ</td><td>25,75,098</td></tr>
</table>
*2024-25 ಮತ್ತು 2025-26 ಸಾಲಿನಲ್ಲಿ ಯಾವುದೇ ಅಂಕಪಟ್ಟಿ ಶುಲ್ಕವನ್ನು ಪಡೆದಿರುವುದಿಲ್ಲ.
</td></tr>
<tr><td></td><td>ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ</td><td>
<table>
<tr><th>ಶೈಕ್ಷಣಿಕ ಸಾಲು</th><th>ಶುಲ್ಕದ ಮೊತ್ತ</th></tr>
<tr><td>2021-22ನೇ</td><td>3826200</td></tr>
<tr><td>2022-23ನೇ</td><td>3155250</td></tr>
<tr><td>2023-24ನೇ</td><td>3104400</td></tr>
</table>
2024-25 ಮತ್ತು 2025-26 ಸಾಲಿನಲ್ಲಿ ಯಾವುದೇ ಅಂಕಪಟ್ಟಿ ಶುಲ್ಕವನ್ನು ಪಡೆದಿರುವುದಿಲ್ಲ.
</td></tr>
<tr><td></td><td>ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ</td><td>
<table>
<tr><th>ಶೈಕ್ಷಣಿಕ ಸಾಲು</th><th>ಶುಲ್ಕದ ಮೊತ್ತ</th></tr>
<tr><td>2022-23ನೇ</td><td>75050</td></tr>
<tr><td>2023-24ನೇ</td><td>69850</td></tr>
<tr><td>2024-25ನೇ</td><td>82350</td></tr>
<tr><td>2025-26ನೇ</td><td>68700</td></tr>
</table>
</td></tr>
<tr><td></td><td>ಕುವೆಂಪು ವಿಶ್ವವಿದ್ಯಾಲಯ</td><td>
<table>
<tr><th>ಶೈಕ್ಷಣಿಕ ಸಾಲು</th><th>ಶುಲ್ಕದ ಮೊತ್ತ</th></tr>
<tr><td>2021-22ನೇ</td><td>3138130</td></tr>
<tr><td>2022-23ನೇ</td><td>3239625</td></tr>
<tr><td>2023-24ನೇ</td><td>2713600</td></tr>
<tr><td>2024-25ನೇ</td><td>-</td></tr>
<tr><td>2025-26ನೇ</td><td>-</td></tr>
</table>
</td></tr>
<tr><td></td><td>ದಾವಣಗೆರೆ ವಿಶ್ವವಿದ್ಯಾಲಯ</td><td>
<table>
<tr><th>ಶೈಕ್ಷಣಿಕ ಸಾಲು</th><th>ಶುಲ್ಕದ ಮೊತ್ತ</th></tr>
<tr><td>2022-23ನೇ</td><td>12135805</td></tr>
<tr><td>2023-24ನೇ</td><td>18244630</td></tr>
<tr><td>2024-25ನೇ</td><td>20597860</td></tr>
<tr><td>2025-26ನೇ</td><td>18461144</td></tr>
</table>
</td></tr>
<tr><td></td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.</td><td>
<table>
<tr><th>ಶೈಕ್ಷಣಿಕ ಸಾಲು</th><th>ಶುಲ್ಕದ ಮೊತ್ತ</th></tr>
<tr><td>2021-22ನೇ</td><td>15440040</td></tr>
<tr><td>2022-23ನೇ</td><td>28796160</td></tr>
<tr><td>2023-24ನೇ</td><td>40448520</td></tr>
<tr><td>2024-25ನೇ</td><td>19483200</td></tr>
</table>
</td></tr>
</table>

<table>
<tr><td></td><td>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ</td><td><table><tr><th>ಶೈಕ್ಷಣಿಕ ಸಾಲು</th><th>ಶುಲ್ಕದ ಮೊತ್ತ</th></tr><tr><td>2022-23ನೇ</td><td>19534000</td></tr><tr><td>2023-24ನೇ</td><td>19061665</td></tr><tr><td>2024-25ನೇ</td><td>38385044</td></tr><tr><td>2025-26ನೇ</td><td>28213760</td></tr></table></td></tr>
<tr><td></td><td>ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು</td><td><table><tr><th>ಶೈಕ್ಷಣಿಕ ಸಾಲು</th><th>ಶುಲ್ಕದ ಮೊತ್ತ</th></tr><tr><td>2021-22ನೇ</td><td>10908450</td></tr><tr><td>2022-23ನೇ</td><td>24036176</td></tr><tr><td>2023-24ನೇ</td><td>37741550</td></tr><tr><td>2024-25ನೇ</td><td>37865325</td></tr><tr><td>2025-26ನೇ</td><td>36851175</td></tr></table></td></tr>
<tr><td></td><td>ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ.</td><td><table><tr><th>ಶೈಕ್ಷಣಿಕ ಸಾಲು</th><th>ಶುಲ್ಕದ ಮೊತ್ತ</th></tr><tr><td>2022-23ನೇ</td><td>1152600</td></tr><tr><td>2023-24ನೇ</td><td>8034520</td></tr><tr><td>2024-25ನೇ</td><td>8048600</td></tr><tr><td>2025-26ನೇ</td><td>5045000</td></tr></table></td></tr>
<tr><td></td><td>ಹಾಸನ ವಿಶ್ವವಿದ್ಯಾಲಯ</td><td><table><tr><th>ಶೈಕ್ಷಣಿಕ ಸಾಲು</th><th>ಶುಲ್ಕದ ಮೊತ್ತ</th></tr><tr><td>2023-24ನೇ</td><td>4464819</td></tr><tr><td>2024-25ನೇ</td><td>6394569</td></tr></table></td></tr>
<tr><td></td><td>ಬೀದರ್ ವಿಶ್ವವಿದ್ಯಾಲಯ</td><td><table><tr><th>ಶೈಕ್ಷಣಿಕ ಸಾಲು</th><th>ಶುಲ್ಕದ ಮೊತ್ತ</th></tr><tr><td>2023-24ನೇ</td><td>2495152</td></tr><tr><td>2024-25ನೇ</td><td>2260268</td></tr><tr><td>2025-26ನೇ</td><td>2259680</td></tr></table></td></tr>
<tr><td></td><td>ಕೊಪ್ಪಳ ವಿಶ್ವವಿದ್ಯಾಲಯ</td><td><table><tr><th>ಶೈಕ್ಷಣಿಕ ಸಾಲು</th><th>ಶುಲ್ಕದ ಮೊತ್ತ</th></tr><tr><td>2023-24ನೇ</td><td>2633686</td></tr><tr><td>2024-25ನೇ</td><td>5737336</td></tr><tr><td>2025-26ನೇ</td><td>7175908</td></tr></table></td></tr>
<tr><td></td><td>ಬಾಗಲಕೋಟ ವಿಶ್ವವಿದ್ಯಾಲಯ ಜಮಖಂಡಿ</td><td><table><tr><th>ಶೈಕ್ಷಣಿಕ ಸಾಲು</th><th>ಶುಲ್ಕದ ಮೊತ್ತ</th></tr><tr><td>2023-24ನೇ</td><td>4362525</td></tr><tr><td>2024-25ನೇ</td><td>8570100</td></tr><tr><td>2025-26ನೇ</td><td>5129650</td></tr></table></td></tr>
</table>